## *4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು*

**ಎಸ್‌ಸಿ. 251/2021**

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ ಶ್ರೀ ಪವನ್ ಕುಮಾರ್ | | *ಪ್ರಮಾಣ ಮಾಡಿಸಿದ ದಿನಾಂಕಃ* |
| **ತಂದೆ/ಗಂಡನ ಹೆಸರು** | ಃ ಶ್ರೀ ಶಿವರಾಜಪ್ಪ | | **05.09.2023** |
| **ವಯಸ್ಸು** | ಃ 33 **ವರ್ಷ** | | |
| **ವೃತ್ತಿ** | ಃ ಬೇಕರಿ ವೃತ್ತಿ | **ಪ್ರಾ.ಸಾ.** ಃ | **01** |
| **ವಾಸಸ್ಥಳ** | ಃ ಗೌಡರಹುಂಡಿ | **ಚಾ.ಸಾ.** ಃ | **01** |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ಮೃತ ಶಿವರಾಜಪ್ಪ ನನ್ನ ತಂದೆ ಇರುತ್ತಾರೆ. 1ನೇ ಆರೋಪಿ ಶರತ್ ಕುಮಾರ್ ನನ್ನ ಸೋದರ ಮಾವ ಇದ್ದು. 2ನೇ ಆರೋಪಿ ಮಲ್ಲಿಗಮ್ಮ ನನ್ನ ಅತ್ತೆ ಅಂದರೆ ನನ್ನ ಹೆಂಡತಿಯ ತಾಯಿ ಇರುತ್ತಾರೆ. 3 ನೇ ಆರೋಪಿ ಮದು 1ನೇ ಆರೋಪಿ ಶರತ್ ಕುಮಾರ್ ಇವರ ಸ್ನೇಹಿತರು ಇರುತ್ತಾರೆ. ಈಗ ನನ್ನ ತಂದೆ 2 ವರ್ಷದ ಹಿಂದೆ ಮೃತರಾಗಿದ್ದಾರೆ. 2 ವರ್ಷದ ಹಿಂದೆ ನಾನು ಕೆ.ಆರ್.ಪೇಟೆಯಲ್ಲಿ ಬೇಕರಿ ಕೆಲಸ ಮಾಡುತ್ತಿದ್ದೆ. ಆ ಕಾಲಕ್ಕೆ ನನ್ನ ಮದುವೆ ಗೊತ್ತಾಗಿದ್ದ ಕಾರಣ ಮೇ ತಿಂಗಳಿನಲ್ಲಿ 3-4 ದಿನಗಳಿಂದ ಊರಿನಲ್ಲಿ ಇದ್ದೆ. ನಾನು 2ನೇ ಆರೋಪಿ ಮಲ್ಲಿಗಮ್ಮ ಇವರ ಮಗಳು ಪ್ರೀತಿ ಅಲಿಯಾಸ್ ನಂದಿನಿ ಇವರನ್ನು ಪ್ರೀತಿ ಮಾಡುತ್ತಿದ್ದೆ. ಪ್ರಾರಂಭದಲ್ಲಿ ಪ್ರೀತಿ ಇವರ ಮನೆಯಲ್ಲಿ ನಮ್ಮ ಮದುವೆಗೆ ಒಪ್ಪಿರಲಿಲ್ಲ ನಂತರ ನನ್ನ ತಂದೆ ಅವರನ್ನು ಒಪ್ಪಿಸಿದ್ದರು. ಆ ನಂತರ ಜೂನ್ 2021 ರಲ್ಲಿ ನನ್ನ ಮದುವೆ ದಿನಾಂಕ ನಿಗಧಿಯಾಗಿತ್ತು.

*2* ಆ ಕಾಲಕ್ಕೆ ದಿಃ*28.05.2021* ರಂದು ಸಂಜೆ *4.30* ರ ಸಮಯದಲ್ಲಿ ನನ್ನ ತಂದೆ ಜಮೀನಿಗೆ ಹೋಗಿ ಬರುವುದಾಗಿ ಹೇಳಿ ಹೋದವರು ರಾತ್ರಿ *8* ಗಂಟೆಯಾದರು ಮನೆಗೆ ಬರಲಿಲ್ಲವಾದ್ದರಿಂದ ನಾವು ಅವರನ್ನು ಎಲ್ಲಾ ಕಡೆ ಹುಡುಕಾಡಿದ್ದೆವು ಮತ್ತು ಸಂಬಂಧಕರಿಗೆ ಫೋನ್ ಮಾಡಿದ್ದೆವು ಆದರೂ ಸಿಕ್ಕಿರಲಿಲ್ಲ. ದಿಃ*30.05.2021* ರಂದು ನಾನು ಶರತ್ ಕುಮಾರ್ ಮತ್ತು ಸುದರ್ಶನ್ ಇವರ ಮೇಲೆ ಅನುಮಾನ ಇರುವುದಾಗಿ ಪೊ. ಕಂಪ್ಲೇಟ್ ಕೊಟ್ಟಿದ್ದೆ. ಈಗ ನಾನು ನೋಡುತ್ತಿರುವ ದೂರು ಅದೇ ಇದ್ದು ಅದರಲ್ಲಿರುವ ಸಹಿ ನನ್ನದೇ ಇದೆ. ಸದರಿ ದೂರನ್ನು ನಿ.ಪಿ–*1* ಮತ್ತು ಸಹಿಯನ್ನು ನಿಪಿ–*1(*ಎ*)* ಎಂದು ಗುರುತಿಸಿದೆ. ನನ್ನ ತಂದೆ ಮನೆಯಿಂದ ಹೋದಾಗ ಬಿಳಿ ಅಂಗಿ ಮತ್ತು ಪಂಚೆ ಧರಿಸಿದ್ದರು. ನಂತರ ಬಿದಿರುಗೂಡು ಬಳಿ ರಾಮಪುರ ನಾಲೆಯಲ್ಲಿ ಯಾವುದೋ ಒಂದು ಶವವಿದೆ ಎಂದು ನಾಗರಾಜು ಎನ್ನುವವರು ದಿಃ*02.06.2021* ರಂದು ಸಂಜೆ *5* ರಿಂದ *5.15* ಕ್ಕೆ ನನಗೆ ಫೋನ್ ಮಾಡಿ ಹೇಳಿದ್ದರು. ಆಗ ನಾನು ಗ್ರಾಮದ ಕೆಲವು ಜನರನ್ನು ಕರೆದುಕೊಂಡು ಆ ಸ್ಥಳಕ್ಕೆ ಹೋಗಿ ನೋಡಿದಾಗ ಅಲ್ಲಿ ನನ್ನ ತಂದೆಯ ಶವ ಇತ್ತು. ಆ ಶವದ ಮೇಲೆ ಕೇವಲ ಚಡ್ಡಿ ಮಾತ್ರ ಇತ್ತು ಶರ್ಟ್ ಮತ್ತು ಪಂಚೆ ಇರಲಿಲ್ಲ. ಆ ನಂತರ ನಾನು ಪುನಃ ಆ ದಿನ ರಾತ್ರಿ *6.45* ರಿಂದ *7* ಗಂಟೆಗೆ ಪೋ.ಠಾಣೆಗೆ ನನ್ನ ತಂದೆಯ ಕೊಲೆ ಆಗಿದೆ ಎಂದು ಇನ್ನೊಂದು ದೂರು ಕೊಟ್ಟಿದ್ದೆ.

*3.* ನಾನು ನೋಡಿದಾಗ ನನ್ನ ತಂದೆ ತಲೆಗೆ, ಬೆನ್ನಿಗೆ ಮತ್ತು ಹಿಮ್ಮಡಿಗಳಿಗೆ ಗಾಯ ಆಗಿತ್ತು. ಆ ಕಾಲಕ್ಕೂ ಸಹ ಶರತ್ ಕುಮಾರ್ ಮತ್ತು ಸುದರ್ಶನ್ ಇವರೇ ನನ್ನ ತಂದೆಯನ್ನು ಕೊಲೆ ಮಾಡಿರಬಹುದು ಎಂದು ದೂರಿನಲ್ಲಿ ಹೇಳಿದ್ದೆ. ನಮ್ಮ ಊರಿನ ಗೌರಮ್ಮ ಇವರು ಅವರ ಮನೆಯಿಂದ ನನ್ನ ತಂದೆಯನ್ನು ಶರತ್ ಕುಮಾರ್ ಇವರು ಸ್ಕೂಟರ್ ನಲ್ಲಿ ಕರೆದುಕೊಂಡು

ಹೋಗಿದ್ದಾಗಿ ಹೇಳಿದ್ದರಿಂದ ಅವರ ಮೇಲೆ ಅನುಮಾನ ಬಂದಿತ್ತು. ರತ್ನಮ್ಮ ಗೌರಮ್ಮನ ಮಗಳು ಇರುತ್ತಾಳೆ. ಈಗ ನಾನು ನೋಡುತ್ತಿರುವ ದಾಖಲೆ ನಾನು ನನ್ನ ತಂದೆಯ ಶವವನ್ನು ನೋಡಿದ ಬಳಿಕ ಕೊಟ್ಟಿದ್ದ ದೂರು ಅದೆ ಮತ್ತು ಅದರಲ್ಲಿರುವ ಸಹಿ ನನ್ನದೇ ಇದೆ. ಸದರಿ ದೂರನ್ನು ನಿ.ಪಿ-*2* ಮತ್ತು ಸಹಿಯನ್ನು ನಿಪಿ-*2(*ಎ*)* ಎಂದು ಗುರುತಿಸಿದೆ. ದೂರು ಕೊಟ್ಟ ಬಳಿಕ ಪೋಲೀಸರು ನನ್ನ ತಂದೆ ಶವ ಇದ್ದ ಜಾಗಕ್ಕೆ ಬಂದಿದ್ದರು. ಆ ಕಾಲಕ್ಕೆ ನಾನು ಪೊಲೀಸರಿಗೆ ನನ್ನ ತಂದೆಯ ಶವವನ್ನು ತೋರಿಸಿದ್ದೆ. ಆ ಕಾಲಕ್ಕೆ ನನ್ನ ತಂದೆಯ ಶವ ಪೂರ್ವಕ್ಕೆ ಕಾಲು ಪಶ್ಚಿಮಕ್ಕೆ ತಲೆ ಮಾಡಿಕೊಂಡು ಬಿದ್ದಿತ್ತು ಮತ್ತು ಕೊಳೆತ ಸ್ಥಿತಿಯಲ್ಲಿ ಇತ್ತು.

*4.* ಪೋಲೀಸರು ನನ್ನ ತಂದೆಯ ಶವವನ್ನು ವಶಕ್ಕೆ ಪಡೆದು ಮಹಜರ್ ಮಾಡಿದ್ದರು. ನಂತರ ಶವವನ್ನು ಮೈಸೂರಿನ ಕೆ.ಆರ್.ಆಸ್ಪತ್ರೆಯ ಶವಗಾರಕ್ಕೆ ಕಳುಹಿಸಿದ್ದರು. ಮಹಜರ್ ಕಾಲಕ್ಕೆ ನಾನೇ ನನ್ನ ತಂದೆಯ ಶವವನ್ನು ಗುರುತಿಸಿದೆ. ಆ ದಿನ ರಾತ್ರಿ *8* ರಿಂದ *9* ಗಂಟೆ ವರೆಗೆ ಪೋ.ವಾಹನದ ಲೈಟ್ ಬೆಳಕಿನಲ್ಲಿ ಮಹಜರ್ ಮಾಡಿದ್ದರು. ಮಹಜರ್ ಗೆ ಮಹೇಶ, ಗಿರಿಯಯ್ಯ ಮತ್ತು ಸೋಮಣ್ಣ ಎನ್ನುವವರು ಸಹಿ ಹಾಕಿದ್ದರು. ಮಹಜರ್ ಕಾಲಕ್ಕೆ ಪೋಲೀಸರು ಶವ ದೊರೆತ ಸ್ಥಳದಿಂದ ಒಂದು ಬಾಟಲ್ ನೀರನ್ನು ಸಹ ಸಂಗ್ರಹಿಸಿದ್ದರು. ಈಗ ನಾನು ನೋಡುತ್ತಿರುವ ಮಹಜರ್ ಅದೇ ಇದ್ದು ಮತ್ತು ಅದರಲ್ಲಿರುವ ಸಹಿ ನನ್ನದೇ ಇದೆ. ಸದರಿ ಮಹಜರ್ ಅನ್ನು ನಿ.ಪಿ-*3* ಮತ್ತು ಸಹಿಯನ್ನು ನಿಪಿ-*3(*ಎ*)* ಎಂದು ಗುರುತಿಸಿದೆ. ನಾನು ಪ್ರೀತಿ ಅಲಿಯಾಸ್ ನಂದಿನಿ ಇವರನ್ನು ಮದುವೆಯಾಗುವುದು ಶರತ್ ಕುಮಾರ್ ಮತ್ತು ಮಲ್ಲಿಗಮ್ಮ ಇವರಿಗೆ ಇಷ್ಟವಿರಲಿಲ್ಲ ಆದಾಗ್ಯೂ ಸಹ ನನ್ನ ತಂದೆ ಅವರೊಂದಿಗೆ ಚರ್ಚಿಸಿ ಮದುವೆಗೆ ಒಪ್ಪಿಸಿದ್ದರು. ಶರತ್ ಕುಮಾರ್ ಇವರಿಗೆ ಮಲ್ಲಿಗಮ್ಮ ಇವರೊಂದಿಗೆ ಸಂಬಂಧ ಇದ್ದುದ್ದರಿಂದ ಮಲ್ಲಿಗಮ್ಮ ಇವರು ಶರತ್ ಕುಮಾರ್

ಇವರಿಗೆ ಹೇಗಾದರೂ ಮಾಡಿ ಮದುವೆ ನಿಲ್ಲಿಸಿ ಎಂದು ಹೇಳಿದ್ದರು ಮತ್ತು ಆ ಕಾರಣಕ್ಕೆ ನನ್ನ ತಂದೆಯನ್ನು ಕೊಲೆ ಮಾಡಿದರೆ ಮದುವೆ ನಿಂತುಹೊಗುತ್ತದೆ ಎನ್ನುವ ಕಾರಣಕ್ಕೆ ಶರತ್ ಕುಮಾರ್ ಇವರು ಪೊಲೀಸರು ಮುಂದೆ ಒಪ್ಪಿಕೊಂಡಿದ್ದರು.

*5.* ಶರತ್ ಕುಮಾರ್ ಇವರು ನನ್ನ ತಂದೆಯನ್ನು ಮೊಟಾರ್ ಸೈಕಲ್ ನಲ್ಲಿ ಕೂರಿಸಿಕೊಂಡು ಶರತ್ ಕುಮಾರ್ ಇವರ ಕಬ್ಬಿನ ಗದ್ದೆಗೆ ಕರೆದುಕೊಂಡು ಹೋಗಿ ಅಲ್ಲಿ ಕಬ್ಬಿಣದ ಆ್ಯಂಗೂಲರ್ ನಿಂದ ನನ್ನ ತಂದೆಯ ತಲೆಗೆ, ಬೆನ್ನಿಗೆ ಹೊಡೆದು ಸಾಯಿಸಿರುವುದಾಗಿ ನಂತರ ಶವವನ್ನು ಅಲ್ಲಿಯೇ ಬಿಟ್ಟು ಸ್ಕೂಟರ್ ನಲ್ಲಿ ಅಹಲೆ ಗ್ರಾಮಕ್ಕೆ ಹೋಗಿ *3* ನೇ ಆರೋಪಿ ಮದು ಇವರನ್ನು ಕರೆದುಕೊಂಡು ಬಂದು ತನ್ನ ಜಮೀನಿನ ಬಳಿ ಬಿಟ್ಟು ಸ್ಕೂಟರ್ ನಲ್ಲಿ ಪುನಃ ನಮ್ಮ ಮನೆಗೆ ಬಂದು ತಮ್ಮ ಟ್ರಾಕ್ಟರ್ ಮತ್ತು ಟ್ರೇಲರ್ ಅನ್ನು ತೆಗೆದುಕೊಂಡು ಹೋಗಿ ಮದು ಇವರ ಸಹಾಯದಿಂದ ನಮ್ಮ ತಂದೆಯ ಶವವನ್ನು ಟ್ರಾಕ್ಟರ್ ನಲ್ಲಿ ಹಾಕಿಕೊಂಡು ಹತ್ತುವಾಳುಕಟ್ಟೆ ಬಿಸಾಡಲು ಹೋದಾಗ ಅಲ್ಲಿ ಯಾರೋ ಕುಳಿತುಕೊಂಡಿದ್ದನ್ನು ನೋಡಿ ಪುನಃ ಮುಂದೆ ಹೋಗಿ ಸೇತುವೆ ಹತ್ತಿರ ಬಂದು ಸತ್ತುವರು ದೆವ್ವ ಆಗುತ್ತಾರೆ ಎನ್ನುವ ಕಾರಣಕ್ಕೆ ಕುಡುಗೋಲಿನಿಂದ ನನ್ನ ತಂದೆಯ ಹಿಮ್ಮಡಿಗಳನ್ನು ಕೊಚ್ಚಿ ಹಾಕಿ ನನ್ನ ತಂದೆಯ ಶವ, ಕಬ್ಬಿಣದ ಆ್ಯಂಗೂಲರ್, ಕುಡುಗೋಲು ಮತ್ತು ನನ್ನ ತಂದೆಯ ಬಟ್ಟೆಗಳನ್ನು ಸೇತುವೆ ಬಳಿ ಇರುವ ನಾಲೆಗೆ ಎಸೆದು ನಂತರ ಅಹಲ್ಯಕ್ಕೆ ಹೋಗಿ ಮದುವನ್ನು ಬಿಟ್ಟು ವಾಪಸ್ಸು ಊರಿಗೆ ಬಂದಿದ್ದಾಗಿ ಶರತ್ ಕುಮಾರ್ ಇವರು ಹೇಳಿದ್ದರು. ದಿಃ*09.06.2021* ರಂದು ಶರತ್ ಕುಮಾರ್ ಇವರು ಆ ಎಲ್ಲಾ ವಿಷಯಗಳನ್ನು ಹೇಳಿದ್ದರು. ಅವರು ಆ ರೀತಿ ಹೇಳಿದಾಗ ನಾನು, ನನ್ನ ತಮ್ಮ ಪೋ.ಠಾಣೆಯಲ್ಲಿ ಹಾಜರಿದ್ದೆವು.

*6.* ಆ ಬಳಿಕ ಪೋಲೀಸರು ಶವ ಸಾಗಿಸಲು ಉಪಯೋಗಿಸಿದ್ದ ಟ್ರಾಕ್ಟರ್, ಟ್ರೇಲರ್ ಮತ್ತು ನನ್ನ ತಂದೆಯನ್ನು ಕರೆದುಕೊಂಡು ಹೋಗಿದ್ದ ಮೋಟಾರ್ ಸೈಕಲ್ ಅನ್ನು ವಶಪಡಿಸಿಕೊಂಡಿದ್ದರು. ಬಳಿಕ ಪೋಲೀಸರು ಶರತ್ ಕುಮಾರ್ ಮತ್ತು ಮದು ಇವರನ್ನು ಕರೆದುಕೊಂಡು ನನ್ನ ತಂದೆ ಶವ ಬಿಸಾಡಿದ್ದ ಸ್ಥಳಕ್ಕೆ ಹೋಗಿದ್ದರು. ಅಲ್ಲಿ ಈಜುಗಾರರನ್ನು ಕರೆಸಿ ಹುಡುಕಿಸಿದಾಗ ಅಲ್ಲಿ ಪಂಚೆ, ಕುಡುಗೋಲು ಮತ್ತು ಆ್ಯಂಗೂಲರ್ ದೊರೆತ್ತಿದ್ದವು. ಆ ಕಾಲಕ್ಕೆ ನನ್ನ ತಂದೆಯ ಕೊಲೆಯಲ್ಲಿ ಸುದರ್ಶನ್ ಇವರ ಪಾತ್ರ ಇಲ್ಲ ಎಂದು ಗೊತ್ತಾಗಿದ್ದರಿಂದ ಆ ಕುರಿತು ಸಹ ಹೇಳಿಕೆ ಕೊಟ್ಟಿದ್ದೆ. ಕೋರ್ಟ್ ಮುಂದೆ ಇರುವ ಆರೋಪಿಗಳೇ ಶರತ್ ಕುಮಾರ್, ಮದು ಮತ್ತು ಮಲ್ಲಿಗಮ್ಮ ಇರುತ್ತಾರೆ. ಮದು ಇವರು ಶರತ್ ಕುಮಾರ್ ಇವರ ಮನೆಗೆ ಆಗಾಗ ಬರುತ್ತಿದ್ದಾಗ ನಾನು ನೋಡಿದ್ದರಿಂದ ನನಗೆ ಅವರ ಪರಿಚಯ ಇದೆ. ತನಿಖೆ ವೇಳೆಯಲ್ಲಿ ಡಿ.ಎನ್.ಎ ಪರೀಕ್ಷೆ ಸಲುವಾಗಿ ನನ್ನ ಮತ್ತು ನನ್ನ ತಮ್ಮನ ರಕ್ತವನ್ನು ನಂಜನಗೂಡು ನ್ಯಾಯಾಲಯದಲ್ಲಿ ಪಡೆದಿದ್ದರು. ಆ ಕಾಲಕ್ಕೆ ನಮ್ಮ ಒಪ್ಪಿಗೆ ಸೂಚಿಸಿ ಒಪ್ಪಿಗೆ ಪತ್ರಕ್ಕೆ ಸಹಿ ಹಾಕಿದ್ದೇವು. ಈಗ ನಾನು ನೋಡುತ್ತಿರುವ ದಾಖಲೆ ಆ ಕಾಲಕ್ಕೆ ನಾನು ಸಹಿ ಮಾಡಿದ್ದ ಪತ್ರ ಇದ್ದು ಅದರಲ್ಲಿರುವ ಸಹಿ ನನ್ನದೇ ಇದೆ. ಸದರಿ ದಾಖಲೆಯನ್ನು ನಿ.ಪಿ-4 ಮತ್ತು ಸಹಿಯನ್ನು ನಿ.ಪಿ-4(ಎ) ಎಂದು ಗುರುತಿಸಿದೆ.

*7.* ನನ್ನ ತಂದೆಯನ್ನು ಹೊಡೆಯಲು ಉಪಯೋಗಿಸಿದ್ದ ಕಬ್ಬಿಣದ ಆ್ಯಂಗೂಲರ್ ಮತ್ತು ಕುಡುಗೋಲನ್ನು ಹಾಗೂ ನನ್ನ ತಂದೆಯ ಪಂಚೆ, ಅಂಡರ್ ವೇರ್ ಅನ್ನು ನೋಡಿದರೆ ಗುರುತಿಸುತ್ತೇನೆ. ಈಗ ನಾನು ನೋಡುತ್ತಿರುವ ವಸ್ತುಗಳು ಅವೇ ಇರುತ್ತವೆ. ಸದರಿ ಆ್ಯಂಗೂಲರ್, ಕುಡುಗೋಲು, ಪಂಚೆ ಮತ್ತು ಅಂಡರ್ ವೇರ್ ಕ್ರಮವಾಗಿ ಎಂ.ಒ 1 ರಿಂದ 4 ಎಂದು ಗುರುತಿಸಿದೆ.

**ಈ ವೇಳೆಗೆ ಆರೋಪಿ ಪರ ವಕೀಲರು ಗೈರು ಹಾಜರಿದ್ದು ಈ ದಿನ ವಕೀಲರ ಸಂಘದಿಂದ ಮುಷ್ಕರ ಘೋಷಣೆ ಮಾಡಿದ್ದು ಆ ಕಾರಣದಿಂದ ಆರೋಪಿತರು ಸಮಯ ಕೋರಿದ್ದು ಮುಂದೂಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
ಮೈಸೂರು